ಅಧ್ಯಕ್ಷರು:– ಆಯಿತು. ಈ ಪ್ರಶ್ನೆಯನ್ನು ಮುಂದಕ್ಕೆ ಹಾಕಿದ್ದೇನೆ. ಈಗ ವಿಶ್ವೇಶ್ವರ ಹೆಗಡೆ ಕಾಗೇರಿಯವರ ಪ್ರಶ್ನೆ.

ಮಂಗನ ಖಾಯಿಲೆಯ ಚಿಕಿತ್ಸೆ

51(151); ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ)

ಅ) ರಾಜ್ಯದಲ್ಲಿ ಮಂಗನ ಕಾಯಿಲೆಗೆ ತುತ್ತಾಗಿರುವ ಸಂಖ್ಯೆ ಎಷ್ಟು; ಈ ಪೈಕಿ ಮೃತಪಟ್ಟಿರುವವರ ಸಂಖ್ಯೆ ಎಷ್ಟು; (ಕಳೆದ ಮೂರು ವರ್ಷಗಳ ವಿವರವನ್ನು ಜಿಲ್ಲಾವಾರು ನೀಡುವುದು)

ಆ) ಹಾಗಾದರೆ ಮಂಗನಕಾಯಿಲೆಗೆ ತುತ್ತಾಗಿ ಮೃತಪಟ್ಟಿರುವವರಿಗೆ ಸರ್ಕಾರ ಪರಿಹಾರ ನೀಡಿದೆಯೇ; ಇಲ್ಲದಿದ್ದಲ್ಲಿ ಕಾರಣವೇನು;

ಇ) ಮಂಗನಕಾಯಿಲೆಗೆ ತುತ್ತಾದವರಿಗೆ ಅಗತ್ಯ ಚಿಕಿತ್ಸೆ ನೀಡಲು ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧ ಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ರಾಜ್ಯದಲ್ಲಿ ಮಂಗನಕಾಯಿಲೆಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಮಂಗನ ಕಾಯಿಲೆಗೆ ತುತ್ತಾಗಿರುವ ಸಂಖ್ಯೆ ಹಾಗೂ ಈ ಪೈಕಿ ಮೃತಪಟ್ಟಿರುವವರ ಸಂಖ್ಯೆ (ಕಳೆದ ಮೂರು ವರ್ಷಗಳ ಜಿಲ್ಲಾವಾರು ವಿವರ) ಹೀಗಿದೆ.

2012 ರಿಂದ 2014 ರವರೆಗೆ ವರದಿಯಾದ ಮಂಗನ ಕಾಯಿಲೆಯ ವಿವರ									
ಕ್ರ.ಸಂ.	ಜಿಲ್ಲೆ	2011		2012		2013		2014 (21–6–2015 ವರೆಗೆ)	
		ಪ್ರಕರಣ	ಮರಣ	ಪ್ರಕರಣ	ಮರಣ	ಪ್ರಕರಣ	ಮರಣ	ಪ್ರಕರಣ	ಮರಣ
1	ಶಿವಮೊಗ್ಗ	14	0	92	1	3	0	137	1
2	ಹೊನ್ನಾವರ	3	1	0	0	0	0	0	0
3	ಚಿಕ್ಕಮಗಳೂರು	2	0	0	0	0	0	1	0
4	ಉತ್ತರ ಕನ್ನಡ	0	0	0	0	8	0	17	0
5	ಚಾಮರಾಜನಗರ	0	0	5	0	6	0	0	0
6	ಮಂಗಳೂರು	0	0	0	0	0	0	1	0
ಒಟ್ಟು		**19**	**1**	**97**	**1**	**17**	**0**	**156**	**1**

ಆ) ಇಲ್ಲ

ಮಂಗನಕಾಯಿಲೆಗೆ ತುತ್ತಾಗಿ ಮೃತಪಟ್ಟಿರುವವರಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಪರಿಹಾರ ನೀಡಲು ಅವಕಾಶವಿರುವುದಿಲ್ಲ.

ಇ) ಇಲ್ಲಾ

ಮಂಗನಕಾಯಿಲೆಗೆ ನಿರ್ದಿಷ್ಠವಾದ ಚಿಕಿತ್ಸೆ ಇರುವುದಿಲ್ಲ. ರೋಗಲಕ್ಷಣಗಳಿಗನುಗುಣವಾಗಿ ಚಿಕಿತ್ಸೆ ನೀಡಲಾಗುತ್ತಿದೆ. ಈ ಚಿಕಿತ್ಸೆಗೆ ಅಗತ್ಯವಿರುವ ಔಷಧಿಗಳು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಲಭ್ಯವಿರುತ್ತವೆ ಹಾಗೂ ಪರಿಮಾಣುಕ್ರಿಮಿ ಪರಿಶೋಧನಾ ಪ್ರಯೋಗಶಾಲೆ (ವಿಡಿಎಲ್) ಶಿವಮೊಗ್ಗದಿಂದಲೂ ಮಂಗನಕಾಯಿಲೆ ಪೀಡಿತ ಪ್ರದೇಶಗಳ ಆಸ್ಪತ್ರೆಗಳಿಗೆ ಈ ಔಷಧಿಗಳನ್ನು ಬೇಡಿಕೆ ಅನ್ವಯ ಸರಬರಾಜು ಮಾಡಲಾಗುತ್ತದೆ.

ಈ)

- ರಾಜ್ಯಮಟ್ಟದಲ್ಲಿ ದಿನಾಂಕ:6–05–2014 ರಂದು ಆಯುಕ್ತರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಕೆ.ಎಫ್.ಡಿ ನಿಯಂತ್ರಣ ಸಮಿತಿ ಸಭೆಯನ್ನು ಕರೆದು ರೋಗ ನಿಯಂತ್ರಣದ ಬಗ್ಗೆ ಜಿಲ್ಲಾ ಆಕುಕ ಅಧಿಕಾರಿಗಳು (ಶಿವಮೊಗ್ಗ, ಚಾಮರಾಜನಗರ, ಚಿಕ್ಕಮಗಳೂರು,

ಕಾರವಾರ, ಮಂಗಳೂರು) ಇವರಿಗೆ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಮಂಗನ ಕಾಯಿಲೆ ದೃಡಪಟ್ಟ ಪ್ರದೇಶದಿಂದ **5 ಕಿ ಮಿ ರಿಂದ 10 ಕಿ ಮೀ** ವ್ಯಾಪ್ತಿಯಲ್ಲಿ ಲಸಿಕಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಕ್ರಮಕೈಗೊಳ್ಳಲಾಗಿದೆ. ಹೆಚ್ಚುವರಿಯಾಗಿ **10 ಸಾವಿರ ಡೋಸ್** ಲಸಿಕೆ ದಾಸ್ತಾನು ಇರಿಸಲು ಕ್ರಮ ಕೈಗೊಳ್ಳಲಾಗಿದೆ. 65 ವರ್ಷ ಮೇಲ್ಪಟ್ಟ ವಯಸ್ಸಿನವರಿಗೂ ಲಸಿಕೆ ನೀಡಲು ಸೂಚಿಸಲಾಗಿದೆ. 2014–05ನೇ ಸಾಲಿಗೆ 208688 ಡೋಸ್ ಕೆ.ಎಫ್.ಡಿ ಲಸಿಕೆಯ ಬೇಡಿಕೆ ಪಟ್ಟಿಯನ್ನು ಸಲ್ಲಿಸಲಾಗಿದೆ.

- ದಿ:12–6–2014 ರಂದು ಮಾನ್ಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ ರಾಜ್ಯ ಮಟ್ಟದ ಸಭೆಯನ್ನು ಏರ್ಪಡಿಸಿ ಕೆ.ಎಫ್/ಡಿ ಪೀಡಿತ 5 ಜಿಲ್ಲೆಗಳ **(ಶಿವಮೊಗ್ಗ, ಚಾಮರಾಜನಗರ, ಚಿಕ್ಕಮಗಳೂರು, ಕಾರವಾರ, ಮಂಗಳೂರು)** ಸಂಬಂದಿಸಿದ ಅಧಿಕಾರಿಗಳು ಹಾಗು ಪಶು ಸಂಗೋಪನಾ ಇಲಾಖೆ, ಅರಣ್ಯ ಇಲಾಖೆಯ ಉನ್ನತ ಅಧಿಕಾರಿಗಳ ಸಹಯೋಗದೊಂದಿಗೆ ಪ್ರತ್ಯೇಕ ಜಿಲ್ಲಾ ಮಟ್ಟದ ಸಭೆಯಲ್ಲಿ ರೋಗ ನಿಯಂತ್ರಣದ ಬಗ್ಗೆ ಸಂಯುಕ್ತವಾಗಿ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

- ಮುಂಜಾಗ್ರತಾ ಕ್ರಮವಾಗಿ ಮಂಗನ ಕಾಯಿಲೆ ದೃಡಪಟ್ಟ ಪ್ರದೇಶಗಳಲ್ಲಿ ಕೆಎಫ್‌ಡಿ ಲಸಿಕೆ ನೀಡಲಾಗಿದೆ. ಮುಂದಿನ ಸಾಲಿಗೆ ಬೇಕಾಗುವ ಲಸಿಕಾ ಬೇಡಿಕೆ ಪಟ್ಟಿಯನ್ನು ಸಲ್ಲಿಸಲಾಗಿದೆ.

- ಮಂಗನಕಾಯಿಲೆಯು ವ್ಯಾಪಿಸಿರುವ ಮತ್ತು ಶಂಕಿತ ಪ್ರದೇಶಗಳ ಜನರಿಗೆ ಮಂಗನ ಕಾಯಿಲೆಯ ವಿರುದ್ದ **18870** ಡೋಸ್ ಲಸಿಕೆ ನೀಡಲಾಗಿದೆ. **21000** ಲಸಿಕೆ ಖರೀದಿ ಮಾಡಲಾಗಿದ್ದು ಉಳಿಕೆ **2130** ಲಸಿಕೆ ಪೈಪ್ ಲೈನ್ ದಾಸ್ತಾನಿನಲ್ಲಿದೆ. ಮಂಗಗಳು ಸಾಯುತ್ತಿರುವ ಕಾಡುಗಳಿಗೆ ಯಾರೂ ಹೋಗದಿರಲು ಸೂಚಿಸಲಾಗಿದೆ. ಹೋಗಲೇಬೇಕಾದಲ್ಲಿ ಮೈ ತುಂಬಾ ಮುಚ್ಚುವಂತೆ

ಬಟ್ಟೆ ಧರಿಸಿಲು ಡಿಎಂಪಿ ತೈಲವನ್ನು ಕೈಕಾಲುಗಳಿಗೆ ಲೇಪಿಸಿ ಹೋಗಲು ಹಾಗೂ ಬಂದನಂತರ ಬಿಸಿ ನೀರಿನಿಂದ ಸೋಪು ಬಳಸಿ ಸ್ನಾನ ಮಾಡಲು ಸಮುದಾಯಕ್ಕೆ ಆರೋಗ್ಯ ಶಿಕ್ಷಣ ನೀಡಲಾಗಿದೆ. **(ಡಿಎಂಪಿ ತೈಲವನ್ನು ಬಳಸಿದಾಗ ಅದರ ಶಕ್ತಿಯು {Efficacy} 4 ರಿಂದ 6 ಘಂಟೆಗಳವರೆಗೆ ಇರುತ್ತದೆ)**

- ಶಂಕಿತ ರೋಗಿಗಳಿಂದ ರಕ್ತದ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲು ಸಂಬಂಧಪಟ್ಟ ಆರೋಗ್ಯಾಧಿಕಾರಿಗಳಿಗೆ ನಿರ್ದೇಶಿಸಲಾಗಿದೆ.

- ಕ್ಷೇತ್ರ ಸಿಬ್ಬಂದಿ ಮನೆ ಮನೆ ಬೇಟಿ ನೀಡಿ ಸಮುದಾಯಕ್ಕೆ ಮಂಗನ ಕಾಯಿಲೆಯ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

- ಜನನಿಬಿಢ ಪ್ರದೇಶಗಳಲ್ಲಿ ಮಂಗನ ಕಾಯಿಲೆಯ ಬಗ್ಗೆ ಕರ ಪತ್ರದೊಂದಿಗೆ ಸಮುದಾಯಕ್ಕೆ ಸೂಕ್ತ ಮಾಹಿತಿ ನೀಡಲಾಗುತ್ತಿದೆ.

- ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಸೂಕ್ತ ವೈದ್ಯಕೀಯ ನೆರವಿಗಾಗಿ ಸಾಕಷ್ಟು ಪ್ರಮಾಣದಲ್ಲಿ ಔಷಧಿ ದಾಸ್ತಾನು ಮಾಡಲಾಗಿದೆ.

- ತಾಲ್ಲೂಕು ಕೇಂದ್ರದ ಆಸ್ಪತ್ರೆಗಳಲ್ಲಿ ಮಂಗನ ಕಾಯಿಲೆಗಾಗಿಯೇ ಪ್ರತ್ಯೇಕ ವಾರ್ಡ ಕಾದಿರಿಸಿಲಾಗಿದೆ.

- ಮಂಗನ ಕಾಯಿಲೆ ಪೀಡಿತ ಪ್ರದೇಶಗಳಲ್ಲಿ ಸಂಚಾರಿ ಆರೋಗ್ಯ ಘಟಕದ ಸೇವೆಗಳನ್ನು ಬಳಸಿಕೊಳ್ಳಲಾಗುತ್ತಿದೆ.

- ಹೆಚ್ಚಿನ ವೈದ್ಯಕೀಯ ನೆರವಿನ ಅವಶ್ಯಕತೆಯಿದ್ದಲ್ಲಿ ತುರ್ತು ಸೇವೆಗಾಗಿ ಆರೋಗ್ಯ ಕವಚ–108 ಅಂಬ್ಯುಲೆನ್ಸ್‌ಗಳನ್ನು ಬಳಸಿಕೊಳ್ಳಲಾಗುತ್ತಿದೆ.

- ಮಂಗನ ಕಾಯಿಲೆ ಕಾಣಿಸಿಕೊಂಡ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಸೂಕ್ತ ಆರೋಗ್ಯ ಶಿಕ್ಷಣದೊಂದಿಗೆ ಮಂಗನ ಕಾಯಿಲೆಯ ಲಕ್ಷಣಗಳುಳ್ಳ ರೋಗಿಗಳನ್ನು ಕಂಡಕೂಡಲೇ ಸ್ಥಳೀಯ

ಆರೋಗ್ಯಾಧಿಕಾರಿಗಳಿಗೆ ತಿಳಿಸಲು ಸ್ಥಳೀಯರಲ್ಲಿ ಮನವರಿಕೆ ಮಾಡಲಾಗಿದೆ.

- ಕೆ.ಎಫ್.ಡಿ. ಲಸಿಕೆಗಳನ್ನು ವಿಡಿಎಲ್ ಶಿವಮೊಗ್ಗ ವ್ಯಾಪ್ತಿಯಲ್ಲಿಯ ಆರೋಗ್ಯ ಇಲಾಖೆಯಲ್ಲಿಯೇ ತಯಾರಿಸಲು ಕ್ರಮಕೈಗೊಳ್ಳಲಾಗಿದೆ.
- ಕೆ.ಎಫ್.ಡಿ ಕ್ಷೇತ್ರ ಘಟಕ ಸಾಗರವನ್ನು ತೀರ್ಥಹಳ್ಳಿಗೆ ಸ್ಥಳಾಂತರಿಸದಿರಲು ಕ್ರಮ ಕೈಗೊಳ್ಳಲಾಗಿದೆ.
- ಆರ್.ಟಿ.ಪಿಸಿಆರ್ ಲ್ಯಾಬ್‌ನ್ನು ಉನ್ನತೀಕರಿಸಲು ಕ್ರಮ ಕೈಗೊಳ್ಳಲಾಯಿತು.

ಜಿಲ್ಲಾ ಆಡಳಿತ ಮತ್ತು ಜಿಲ್ಲಾ ಆರೋಗ್ಯಾಧಿಕಾರಿಯವರ ಸತತ ಕಾರ್ಯಚರಣೆಯಿಂದ ಮಂಗನ ಕಾಯಿಲೆಯು ಹತೋಟಿಯಲ್ಲಿ ಇರುತ್ತದೆ.

ಅನುಬಂಧ

ಮಂಗನ ಕಾಯಿಲೆಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳು

- ಮುಂಜಾಗ್ರತಾ ಕ್ರಮವಾಗಿ ಮಂಗನ ಕಾಯಿಲೆ ದೃಢಪಟ್ಟ ಪ್ರದೇಶಗಳಲ್ಲಿ ಕೆಎಫ್‌ಡಿ ಲಸಿಕೆ ನೀಡಲಾಗಿದೆ. ಮುಂದಿನ ಸಾಲಿಗೆ ಬೇಕಾಗುವ ಲಸಿಕಾ ಬೇಡಿಕೆ ಪಟ್ಟಿಯನ್ನು ಸಲ್ಲಿಸಲಾಗಿದೆ.
- ಮಂಗನಕಾಯಿಲೆಯು ವ್ಯಾಪಿಸಿರುವ ಮತ್ತು ಶಂಕಿತ ಪ್ರದೇಶಗಳ ಜನರಿಗೆ ಮಂಗನ ಕಾಯಿಲೆಯ ವಿರುದ್ಧ **22,653** ಡೋಸ್ ಲಸಿಕೆ ನೀಡಲಾಗಿದೆ. ಮಂಗಗಳು ಸಾಯುತ್ತಿರುವ ಕಾಡುಗಳಿಗೆ ಯಾರೂ ಹೋಗದಿರಲು ಸೂಚಿಸಲಾಗಿದೆ. ಹೋಗಲೇಬೇಕಾದಲ್ಲಿ ಮೈ ತುಂಬಾ ಮುಚ್ಚುವಂತೆ ಬಟ್ಟೆ ಧರಿಸಿಲು ಡಿಎಂಪಿ ತೈಲವನ್ನು ಕೈಕಾಲುಗಳಿಗೆ ಲೇಪಿಸಿ ಹೋಗಲು ಹಾಗೂ ಬಂದನಂತರ ಬಿಸಿ ನೀರಿನಿಂದ ಸೋಪು ಬಳಸಿ ಸ್ನಾನ ಮಾಡಲು ಸಮುದಾಯಕ್ಕೆ ಆರೋಗ್ಯ ಶಿಕ್ಷಣ

ನೀಡಲಾಗಿದೆ. **(ಡಿಎಂಪಿ ತೈಲವನ್ನು ಬಳಸಿದಾಗ ಅದರ ಶಕ್ತಿಯು {Efficacy} 4 ರಿಂದ 6 ಘಂಟೆಗಳವರೆಗೆ ಇರುತ್ತದೆ)**

- ಶಂಕಿತ ರೋಗಿಗಳಿಂದ ರಕ್ತದ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಲು ಸಂಬಂಧಪಟ್ಟ ಆರೋಗ್ಯಾಧಿಕಾರಿಗಳಿಗೆ ನಿರ್ದೇಶಿಸಲಾಗಿದೆ.

- ಜನನಿಬಿಡ ಪ್ರದೇಶಗಳಲ್ಲಿ ಮಂಗನ ಕಾಯಿಲೆಯ ಬಗ್ಗೆ ಕರ ಪತ್ರದೊಂದಿಗೆ ಸಮುದಾಯಕ್ಕೆ ಸೂಕ್ತ ಮಾಹಿತಿ ನೀಡಲಾಗುತ್ತಿದೆ.

- ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಸೂಕ್ತ ವೈದ್ಯಕೀಯ ನೆರವಿಗಾಗಿ ಸಾಕಷ್ಟು ಪ್ರಮಾಣದಲ್ಲಿ ಔಷಧಿ ದಾಸ್ತಾನು ಮಾಡಲಾಗಿದೆ.

- ತಾಲ್ಲೂಕು ಕೇಂದ್ರದ ಆಸ್ಪತ್ರೆಗಳಲ್ಲಿ ಮಂಗನ ಕಾಯಿಲೆಗಾಗಿಯೇ ಪ್ರತ್ಯೇಕ ವಾರ್ಡ ಕಾದಿರಿಸಿಲಾಗಿದೆ.

- ಮಂಗನ ಕಾಯಿಲೆ ಪೀಡಿತ ಪ್ರದೇಶಗಳಲ್ಲಿ ಸಂಚಾರಿ ಆರೋಗ್ಯ ಘಟಕದ ಸೇವೆಗಳನ್ನು ಬಳಸಿಕೊಳ್ಳಲಾಗುತ್ತಿದೆ.

- ಹೆಚ್ಚಿನ ವೈದ್ಯಕೀಯ ನೆರವಿನ ಅವಶ್ಯಕತೆಯಿದ್ದಲ್ಲಿ ತುರ್ತು ಸೇವೆಗಾಗಿ ಆರೋಗ್ಯ ಕವಚ–108 ಅಂಬ್ಯುಲೆನ್ಸ್‌ಗಳನ್ನು ಬಳಸಿಕೊಳ್ಳಲಾಗುತ್ತಿದೆ.

- ಮಂಗನ ಕಾಯಿಲೆ ಕಾಣಿಸಿಕೊಂಡ ಪ್ರದೇಶಗಳಲ್ಲಿ ವಾಸಿಸುವ ಜನರಿಗೆ ಸೂಕ್ತ ಆರೋಗ್ಯ ಶಿಕ್ಷಣದೊಂದಿಗೆ ಮಂಗನ ಕಾಯಿಲೆಯ ಲಕ್ಷಣಗಳುಳ್ಳ ರೋಗಿಗಳನ್ನು ಕಂಡಕೂಡಲೇ ಸ್ಥಳೀಯ ಆರೋಗ್ಯಾಧಿಕಾರಿಗಳಿಗೆ ತಿಳಿಸಲು ಸ್ಥಳೀಯರಲ್ಲಿ ಮನವರಿಕೆ ಮಾಡಲಾಗಿದೆ.

- ಅರಣ್ಯ ಇಲಾಖೆ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳು ಈ ಬಗ್ಗೆ ಸಮನ್ವಯ ಸಭೆಯನ್ನು ನಡೆಸಲಾಗುವುದು.

- ಅಗತ್ಯ ಔಷಧಗಳನ್ನು ಸಂಗ್ರಹಿಸಲಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಕಳೆದ ಮೂರು ವರ್ಷದಲ್ಲಿ ಎಷ್ಟು ಜನರು ಈ ಮಂಗನ ಕಾಯಿಲೆ ರೋಗಕ್ಕೆ ತುತ್ತಾಗಿದ್ದಾರೆಂದು ಉತ್ತರ ಒದಗಿಸಿದ್ದಾರೆ. ಈ ವರ್ಷ ಬೇಸಿಗೆಯಲ್ಲಿ ಇದು ಉಲ್ಬಣಗೊಂಡಿದ್ದು, 156 ಜನರು ಈ ವರ್ಷ ರೋಗಕ್ಕೆ ತುತ್ತಾಗಿದ್ದಾರೆ. ಶಿವಮೊಗ್ಗದಲ್ಲಿಯೇ 137 ಜನ. ಉತ್ತರ ಕನ್ನಡದಲ್ಲಿ 17 ಜನ. ಚಿಕ್ಕಮಗಳೂರು ಮತ್ತು ಮಂಗಳೂರಿನಲ್ಲಿ ಇದು affect ಆಗಿದ್ದು, ಒಟ್ಟು 156 ಜನಕ್ಕೆ. ಒಬ್ಬರು ಸತ್ತು ಹೋಗಿದ್ದಾರೆ. ಅವರಿಗೆ ಪರಿಹಾರ ಕೊಡುವುದಕ್ಕೆ ಆರೋಗ್ಯ ಇಲಾಖೆಯಿಂದ ಆಗುವುದಿಲ್ಲವೆಂದು ಹೇಳುತ್ತಿದ್ದಾರೆ. ರಕ್ತ ಪರೀಕ್ಷೆಗೆ ರಕ್ತವನ್ನು ಪುಣೆಗೆ ಕಳುಹಿಸುತ್ತಾರೆ. ನಮ್ಮ ಶಿವಮೊಗ್ಗದಲ್ಲಿ ರಕ್ತ ಪರೀಕ್ಷಾ ಕೇಂದ್ರ ಇದೆ ಎಂದು ಹೇಳಿದ್ದೀರಿ ನೀವು. ಆದರೆ ಪುಣೆಯ National Institute of Virology. ಅದರಲ್ಲಿ RTPCR ಎಂಬ ಪರೀಕ್ಷೆ ಮಾಡಿ ವರದಿ ತರಿಸುವುದು ತಡವಾಗುತ್ತಿದೆ. ಹಾಗಾಗಿ ಶಿವಮೊಗ್ಗದಲ್ಲಿರುವ ನಮ್ಮ ಪರೀಕ್ಷಾ ಕೇಂದ್ರವನ್ನು ಬಲಪಡಿಸಬೇಕು. ಔಷಧಿ ಹಾಗೂ ಲಸಿಕೆಯನ್ನು ಸಹ ಪುಣೆಯಿಂದ ತರಿಸುತ್ತಿದ್ದು, ಇಲ್ಲಿಯೇ ಅದು ತಯಾರಾಗಬೇಕು. ಆಗಸ್ಟ್, ಸೆಪ್ಟೆಂಬರ್ ಹಾಗೂ ಅಕ್ಟೋಬರ್ ತಿಂಗಳಿನಲ್ಲಿಯೇ ಈ ರೋಗಕ್ಕೆ ಬೇಕಾದ ಔಷಧ ಹಾಗೂ ಲಸಿಕೆಗಳನ್ನು ಚುಚ್ಚುವಂತಾಗಬೇಕು. ಕಾಡಿನಲ್ಲಿ ಮಂಗ ಸತ್ತ ಮೇಲೆ ticks (ಉಣಿ) ಎಂಬ ಕೀಟ ಏನಿದೆ, ಅದು ಜನಕ್ಕೆ ಕಚ್ಚಿದ ಮೇಲೆ ಅವರು ಔಷಧಿ ಕೊಡುವುದಲ್ಲ. Precautionary ಆಗಿ ಮೊದಲೇ ಕೊಡಬೇಕು. ಅನೇಕ ಸಂದರ್ಭದಲ್ಲಿ ಅದನ್ನೂ ಮಾಡುವುದಿಲ್ಲ. ಹಾಗಾಗಿ ಔಷಧಿಗಳ ಕೊರತೆ ಇದೆ. ಶಿವಮೊಗ್ಗದಲ್ಲಿ ಪರೀಕ್ಷಾ ಕೇಂದ್ರವನ್ನು ಚೆನ್ನಾಗಿ ನಡೆಸಬೇಕೆಂದು ಕೇಳುತ್ತೇನೆ.

ಶ್ರೀ ಯು.ಟಿ. ಖಾದರ್:– ಮಾನ್ಯ ಅಧ್ಯಕ್ಷರೆ, ಮಂಗನ ಕಾಯಿಲೆಗೆ ಸಂಬಂಧಪಟ್ಟಂತೆ ಬಹುಶಃ ಈ ವರ್ಷ, ಯಾವುದೆಲ್ಲಾ ಮುಂಜಾಗ್ರತೆ ಕ್ರಮವನ್ನು ಇಲಾಖೆ ವಹಿಸಿಕೊಂಡಿದೆ ಅದನೆಲ್ಲಾ ವಹಿಸಿಕೊಂಡಿದೆ. precautionary measure ಆಗಿ 21 ಸಾವಿರ ಲಸಿಕೆಯನ್ನು ನಾವು ಹಂಚಿದ್ದೇವೆ. ಅದರಲ್ಲಿ 18,720 ಲಸಿಕೆಯನ್ನು ನೀಡಲಾಗಿದೆ, ಇನ್ನು ಕೂಡ 2230

ಲಸಿಕೆಗಳಿವೆ. ಆದರೆ ಇವತ್ತು ತೀರ್ಥಹಳ್ಳಿ ಒಂದೇ ಪ್ರದೇಶದಲ್ಲಿ ಉತ್ಪನ್ನ ಜಾಸ್ತಿಯಾಗಿದೆ ಎಂದರೆ, ಮುಂಜಾಗ್ರತ ಕ್ರಮವಾಗಿ, ಎಲ್ಲಿ ಈ ಮಂಗನ ಕಾಯಿಲೆ ಸ್ವಲ್ಪ ಕಾಣಿಸಿಕೊಂಡಿತು, ಆ ಪ್ರದೇಶದ ಸುತ್ತಮುತ್ತಲ ಗ್ರಾಮಕ್ಕೆ ಇನ್ನು ಮುಂದೆ ಆಗಬಾರದ ರೀತಿಯಲ್ಲಿ ಆ ಲಸಿಕೆಯನ್ನು ನೀಡಲಾಗುತ್ತಿದೆ. ಬಹುಶಃ ಈ ವರ್ಷ ಏನಾಗಿದೆ ಎಂದರೆ, ಹೊಸ ಪ್ರದೇಶದಲ್ಲಿ ಕಾಣಿಸಿಕೊಂಡ ಕಾರಣ ಅಲ್ಲಿ ಲಸಿಕೆ ಕೊಡುವುದಕ್ಕಾಗುವುದಿಲ್ಲ, ಏಕೆಂದರೆ, ಅದನ್ನು ಸಂಪೂರ್ಣ ಕಂಟ್ರೋಲ್ ತರುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ತಮ್ಮ ಲ್ಯಾಬ್‌ಗೆ ಸಂಬಂಧಪಟ್ಟಂತೆ ಶಿವಮೊಗ್ಗ ಆಸ್ಪತ್ರೆಯನ್ನು ಉನ್ನತೀಕರಿಸುತ್ತೇವೆ, ಮಣಿಪಾಲಿನಲ್ಲೂ ಅತ್ಯುತ್ತಮವಾದ ಆಸ್ಪತ್ರೆ ಇದೆ. ಅಲ್ಲಿಯೂ ಟೆಸ್ಟ್ ಮಾಡಿದ ನಂತರ ಅಂತಿಮವಾಗಿ ಬೇಕಿದ್ದರೆ ಪುಣೆಗೆ ಕಳುಹಿಸುವಂಥ ವ್ಯವಸ್ಥೆ ಇದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಈಗ ಪುಣೆಗೆ ಹೋಗುತ್ತಿರುವುದರಿಂದ ತಡವಾಗುತ್ತಿದೆ, ಈಗ ನಮ್ಮ ಹೊನ್ನಾವರ ಆ ಭಾಗದ ನಮ್ಮ ಜಿಲ್ಲೆಯಲ್ಲೂ ಇದೆ.

ಅಧ್ಯಕ್ಷರು:– ನಿಮಗೆ ಒಂದು ಸಣ್ಣ ಅಂಶವನ್ನು ಹೇಳುತ್ತೇನೆ, ನೀವು ಕೇಳಿರುವ ಪ್ರಶ್ನೆಗೆ ಸಮಗ್ರವಾದ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಇಲ್ಲ ಸರ್, ಅದರಲ್ಲೇ ಇದೆ.

ಅಧ್ಯಕ್ಷರು:– ಅದು ಎಲ್ಲಿದೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಯಾವುದಿದೆ ಎಂದು ಹೇಳುತ್ತೇನೆ, ಈ ಮಂಗನ ಕಾಯಿಲೆಯನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನೆಂದಿದೆಯಲ್ಲಾ, ಕೊನೆಯಲ್ಲಿ ನೋಡಿ, KFD ಲಸಿಕೆಗಳನ್ನು VDL ಶಿವಮೊಗ್ಗ, ಆರೋಗ್ಯ ವ್ಯಾಪ್ತಿಯಲ್ಲಿ ತಯಾರಿಸಲು ಕ್ರಮ ತೆಗೆದುಕೊಳ್ಳಲಾಗಿದೆ, KFD ಕ್ಷೇತ್ರಘಟಕ, ಸಾಗರವನ್ನು ತೀರ್ಥಹಳ್ಳಿಗೆ ಸ್ಥಳಾಂತರಿಸದಿರಲು ಕ್ರಮ ಕೈಗೊಳ್ಳಲಾಗಿದೆ, ಇದೆಲ್ಲಾ ಇದೆಯಲ್ಲಾ, ಇದೇನೆಂದರೆ, ನಮ್ಮಲ್ಲಿ ಆ ಪರೀಕ್ಷಾ ಕೇಂದ್ರ ಸರಿಯಾಗಿಲ್ಲ, ನಿಮ್ಮದೆ ಶಿವಮೊಗ್ಗದ್ದೆ. ರಕ್ತ ಪರೀಕ್ಷೆಗೆ ಪುಣೆಗೆ ಕಳುಹಿಸುತ್ತಿರುವುದರಿಂದ ತಡವಾಗುತ್ತಿದೆ, ನಮ್ಮಲ್ಲಿರುವ ಆ ಕೇಂದ್ರವನ್ನು

ಬಲಪಡಿಸಬೇಕು. ಲಸಿಕೆಗಳನ್ನು ಅಲ್ಲೇ ಸಿದ್ಧಪಡಿಸಬೇಕು, ಆಗಸ್ಟ್ ಸೆಪ್ಟೆಂಬರ್ ತಿಂಗಳಲ್ಲಿ ಆ ಲಸಿಕೆಗಳನ್ನು ಕೊಡಿಸಬೇಕು.

ಅಧ್ಯಕ್ಷರು:– ಮಾಡಿ, ಆಯಿತು ತೆಗೆದುಕೊಳ್ಳಿ, ನಿಮ್ಮ ಶಿವಮೊಗ್ಗದಲ್ಲೆ ಇದೆಯಲ್ಲಾ, ಅಲ್ಲೇ ತಯಾರು ಮಾಡಿ. ಮೊದಲು ಮಂಗನ ಕಾಯಿಲೆ ಬಂದಾಗ ಎಷ್ಟು ಕಷ್ಟಪಟ್ಟಿದ್ದೇವೆ ನಿಮಗೆ ಗೊತ್ತಾ? ಇದು ನಮ್ಮಲ್ಲೇ ಹಿಟ್ಟಿದ್ದು, ಕ್ಯಾಸನೂರು ಫಾರೆಸ್ಟ್‌ನಲ್ಲಿ ಹುಟ್ಟಿದ್ದು.

ಶ್ರೀ ಯು.ಟಿ. ಖಾದರ್:– ಶಾಸಕರ ಎಲ್ಲಾ ಸಲಹೆ–ಸೂಚನೆಗಳನ್ನು ಪಡೆದುಕೊಂಡು ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡ

52(323); ಶ್ರೀ ಯಾವಗಲ್ ಬಿ.ಆರ್. (ನರಗುಂದ)

ಅ) ಗದಗ ಜಿಲ್ಲೆ ನರಗುಂದ ತಾಲ್ಲೂಕಿನ ಚಿಕ್ಕನರಗುಂದ ಮತ್ತು ರೋಣ ತಾಲ್ಲೂಕಿನ ಹೊಳೆ ಆಲೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ನೂತನ ಕಟ್ಟಡಗಳನ್ನು ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಈ ಕಟ್ಟಡಗಳ ಕಾಮಗಾರಿಗಳನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕಲ್ಯಾಣ ಸಚಿವರು)

ಅ) ಗದಗ ಜಿಲ್ಲೆ ನರಗುಂದ ತಾಲ್ಲೂಕಿನ ಚಿಕ್ಕನರಗುಂದ ಪ್ರಾಥಮಿಕ ಆರೋಗ್ಯ ಕೇಂದ್ರದ ಕಟ್ಟಡ ಕಾಮಗಾರಿಯನ್ನು ಇಲಾಖೆಯಲ್ಲಿ ಲಭ್ಯವಾಗುವ ಅನುದಾನಕ್ಕೆ ಅನುಗುಣವಾಗಿ ಮುಂಬರುವ ವರ್ಷಗಳಲ್ಲಿ ನಿರ್ಮಾಣ ಮಾಡಲಾಗುವುದು.

ಆ) ಗದಗ ಜಿಲ್ಲೆ ರೋಣ ತಾಲ್ಲೂಕಿನ ಹೊಳೆ ಆಲೂರು ಪ್ರಾಥಮಿಕ ಆರೋಗ್ಯ ಕೇಂದ್ರದ ನೂತನ ಕಟ್ಟಡವನ್ನು ಆರ್.ಐ.ಡಿ.ಎಫ್–14ರ